ಕರ್ನಾಟಕ ಸರ್ಕಾರ
ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ

Office of the Deputy director[kvi]
Rural industries. Z.P
Chickmagalur, 08262-295788

ಉಪನಿರ್ದೇಶಕರು[ಗ್ರಾಕೈ]ರವರ ಕಛೇರಿ
ಗ್ರಾಮೀಣ ಕೈಗಾರಿಕೆಗಳು, ಜಿ.ಪಂ
ಚಿಕ್ಕಮಗಳೂರು.08262-295788

E-mail :- ddkvi-cmagalur@karnatakaindustry.gov.in

ಜಿಪಂಚಿ/ಗ್ರಾಕೈ/ಉನಿ/ಸು.ಉ/ಜಿಉಕೈ/ಅಆ/2023-24 ದಿ:-07/08/2023

ಗೆ,
ಹಿರಿಯ ಸಹಾಯಕ ನಿರ್ದೇಶಕರು,
ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ,
ಚಿಕ್ಕಮಗಳೂರು.

ಮಾನ್ಯರೇ,

ವಿಷಯ: 2023-24 ನೇ ಸಾಲಿಗೆ ಇಲಾಖೆಯ ವಿವಿಧ ಯೋಜನೆಯಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2023-24ನೇ ಸಾಲಿಗೆ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಯೋಜನೆ ಮತ್ತು ಜಿಲ್ಲಾ ಉದ್ಯಮ ಕೇಂದ್ರ ಬಂಡವಾಳ ಹೂಡಿಕೆ ಯೋಜನೆಯಡಿ ಮರಗೆಲಸ, ಗಾರೆಕೆಲಸ, ಕ್ಷೌರಿಕ, ದೋಬಿ, ಕಮ್ಮಾರಿಕೆ ಮತ್ತು ಹೊಲಿಗೆಯಂತ್ರ ಕಸುಬಿನ ಸುಧಾರಿತ ಉಪಕರಣ ಹಾಗೂ ಸಾಲ ಸಹಾಯಧನ ಪಡೆಯಲು ಆಸಕ್ತಿಯುಳ್ಳ ಗ್ರಾಮಾಂತರ ಪ್ರದೇಶದ ವೃತ್ತಿನಿರತ ಕಸುಬುದಾರರು ನಿಗಧಿತ ದಾಖಲಾತಿಗಳೊಂದಿಗೆ (ಈ ಕೆಳಗಿನ ನಮೂದಿಸಿರುವ ವೆಬ್‌ಸೈಟ್ ವಿಳಾಸದಲ್ಲಿ)

1) https://chikkamagaluru.nic.in ಅಥವಾ 2)https://zpchikkamagaluru.karnataka.gov.in

website ನಲ್ಲಿ ದಿನಾಂಕ:15.09.2023 ರೊಳಗೆ ಅಪ್‌ಲೋಡ್ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೋರಿದೆ. ಸದರಿ ಪ್ರಕಟಣೆಯನ್ನು ತಮ್ಮ ಇಲಾಖೆಯ ಮುಖಾಂತರ **ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ಹಾಗೂ ಸ್ಥಳೀಯ ದಿನಪತ್ರಿಕೆಯಲ್ಲಿ ಉಚಿತವಾಗಿ** ಪ್ರಕಟಿಸಲು ತಮ್ಮಲ್ಲಿ ಕೋರಲಾಗಿದೆ.

ತಮ್ಮ ನಂಬುಗೆಯ,

ಉಪನಿರ್ದೇಶಕರು(ಗ್ರಾಕೈ),
ಗ್ರಾಮೀಣ ಕೈಗಾರಿಕೆಗಳು, ಜಿ.ಪಂ,
ಚಿಕ್ಕಮಗಳೂರು

**ಪ್ರತಿಯನ್ನು,**

1. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಪಂ, ಚಿಕ್ಕಮಗಳೂರು ರವರ ಅವಗಾಹನೆಗಾಗಿ ಸಲ್ಲಿಸಿದೆ
2. ಜಿಲ್ಲಾ ವಿಜ್ಞಾನ ಸೂಚನಾಧಿಕಾರಿಗಳು, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಚಿಕ್ಕಮಗಳೂರು ರವರಿಗೆ ಜಿಲ್ಲಾ ಪಂಚಾಯಿತಿಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಪೋರ್ಟಲ್(ಲಿಂಕ್) ಬಿಡುಗಡೆಮಾಡಲು ಸಲ್ಲಿಸಿದೆ.
3. ಕಚೇರಿ ಪ್ರತಿ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಗ್ರಾಮೀಣ ಕೈಗಾರಿಕೆಗಳು,
ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು

ಉಪನಿರ್ದೇಶಕರು(ಗ್ರಾಕೈ) ರವರ ಕಛೇರಿ
ಡಿಐಸಿ ಕಟ್ಟಡ, ಕೆ.ಎಂ ರಸ್ತೆ
ಚಿಕ್ಕಮಗಳೂರು ಕಛೇರಿ:08262-295788

| ಕ್ರ.ಸಂ | ಯೋಜನೆ ವಿವರ | ಅರ್ಜಿಯೊಂದಿಗೆ ಸಲ್ಲಿಸಲು ಬೇಕಾದ ದಾಖಲಾತಿಗಳು |
|---|---|---|
| 1 | ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಉಪಕರಣ ಸರಬರಾಜು ಯೋಜನೆಯಡಿ ವಿದ್ಯುತ್ ಚಾಲಿತ ಮರಗೆಲಸ, ದೋಬಿ, ಗಾರೆಕೆಲಸ, ಕಮ್ಮಾರಿಕೆ, ಕ್ಷೌರಿಕ ಮತ್ತು ವಿದ್ಯುತ್ ಚಾಲಿತ ಹೊಲಿಗೆಯಂತ್ರ ವೃತ್ತಿಯ ಉಪಕರಣಗಳನ್ನು ಪಡೆಯುವವರು | 1)ಪಾಸ್ಪೋರ್ಟ್ ಗಾತ್ರದ ಭಾವಚಿತ್ರ (in JPG format)<br>2)ಜಾತಿ ಪ್ರಮಾಣ ಪತ್ರ (in PDF file) (SC, ST, Minority)<br>3) ಆದಾಯ ದೃಢೀಕರಣ ಪತ್ರ (in PDF file) (SC, ST)<br>4)ಮರಗೆಲಸ, ದೋಬಿ, ಗಾರೆಕೆಲಸ, ಕಮ್ಮಾರಿಕೆ, ಕ್ಷೌರಿಕ ಮತ್ತು ಹೊಲಿಗೆಯಂತ್ರ ಕಸುಬಿನ ಕುಶಲಕರ್ಮಿಯಾಗಿದ್ದಲ್ಲಿ ಆಯಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಂದ ದೃಢೀಕರಣ ಪತ್ರ/ ಕಾರ್ಮಿಕ ಇಲಾಖೆಯಿಂದ ವಿತರಿಸಿದ ಕುಶಲಕರ್ಮಿ ಗುರುತಿನ ಚೀಟಿ ಪ್ರತಿ. (in PDF file) |
| 2 | ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ ಬಂಡವಾಳ ಹೂಡಿಕೆ ಸಹಾಯಧನ ಯೋಜನೆಯಡಿ ಸಹಾಯಧನ ಪಡೆಯುವವರು | 1)ಪಾಸ್ಪೋರ್ಟ್ ಗಾತ್ರದ ಭಾವಚಿತ್ರ (in JPG format)<br>2)ಜಾತಿ ಪ್ರಮಾಣ ಪತ್ರ (in PDF file) (SC, ST, Minority)<br>3) ಆದಾಯ ದೃಢೀಕರಣ ಪತ್ರ (in PDF file) (SC, ST)<br>4) ಬ್ಯಾಂಕ್ ಪಾಸ್ ಪುಸ್ತಕ(in PDF file)<br>5) ತಾವು ನಡೆಸುತ್ತಿರುವ ಕಸುಬಿನ ಬಗ್ಗೆ ಆಯಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಂದ ದೃಢೀಕರಣ ಪತ್ರ/ ಕಾರ್ಮಿಕ ಇಲಾಖೆಯಿಂದ ವಿತರಿಸಿದ ಕುಶಲಕರ್ಮಿ ಗುರುತಿನ ಚೀಟಿ ಪ್ರತಿ. (in PDF file) |

ಉಪನಿರ್ದೇಶಕರು(ಗ್ರಾಕೈ),
ಗ್ರಾಮೀಣ ಕೈಗಾರಿಕೆಗಳು, ಜಿ.ಪಂ,
ಚಿಕ್ಕಮಗಳೂರು